ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯಗಳು

ಮಹಾರಾಷ್ಟ್ರದಲ್ಲಿ ಹೊಸ ಸರ್ಕಾರ ಬಂದ ನಂತರ ಕನ್ನಡಿಗರಿಗೆ ತೊಂದರೆಯಾಗಿರುವುದು.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ಮಹಾರಾಷ್ಟ್ರದಲ್ಲಿ ಇತ್ತೀಚೆಗೆ ಹೊಸ ಸರ್ಕಾರ ಅಧಿಕಾರಕ್ಕೆ ಬಂದಿದೆ. ಸರ್ಕಾರದಲ್ಲಿ ಶಿವಸೇನೆಯ ನೇತೃತ್ವದವರು ಮುಖ್ಯ ಮಂತ್ರಿಗಳಾಗಿದ್ದಾರೆ. ಅವರು ಅಧಿಕಾರಕ್ಕೆ ಬಂದ ಪ್ರಾರಂಭದಲ್ಲಿ ಕನ್ನಡಿಗರು ಸೇರಿದಂತೆ ಮರಾಠಿಗರು ಅಲ್ಲದವರನ್ನೆಲ್ಲಾ ಮಹಾರಾಷ್ಟ್ರ ರಾಜ್ಯದಿಂದ ಹೊರಗಡೆ ಹಾಕುತ್ತೇವೆ. ಮತ್ತು ಅಲ್ಲಿರುವವರಿಗೆಲ್ಲಾ ಗುರುತಿನ ಚೀಟಿ ಕೊಡುತ್ತೇವೆ, ಅವರು ಕೂಡಲೇ ಹೋಗಬೇಕು. ಎಂದು ಹೇಳಿ ಭಯ ಭೀತಿಯ ವಾತಾವರಣ ನಿರ್ಮಾಣ ಮಾಡಿದ್ದಾರೆ. ಮಹಾರಾಷ್ಟ್ರದಲ್ಲಿರುವ ಮರಾಠಿಗರಲ್ಲದ ಜನ ಅಲ್ಲಿ ಇರಬೇಕೇ ಬಿಡಬೇಕೆ ಎನ್ನತಕ್ಕ ಚಿಂತನೆಯಲ್ಲಿ ಇದ್ದು, ಮಹಾರಾಷ್ಟ್ರ ರಾಜ್ಯವನ್ನು ಬಿಟ್ಟು ಅವರವರ ರಾಜ್ಯಗಳಿಗೆ ಹೋಗತಕ್ಕ ಕಾರ್ಯದಲ್ಲಿ ನಿರತರಾಗಿದ್ದಾರೆ. ಅಲ್ಲಿರತಕ್ಕ ಅನ್ಯಭಾಷಾ ಜನರಿಗೆ ಮಹಾರಾಷ್ಟ್ರ ಸರ್ಕಾರವು ಸ್ವಲ್ಪವೂ ಸಹ ರಕ್ಷಣೆಯನ್ನು ಕೊಡುತ್ತಿಲ್ಲ. ಅಲ್ಪಸಂಖ್ಯಾತರಿಗೆ ಅಲ್ಲಿರತಕ್ಕ ಕನ್ನಡಿಗರಿಗೆ ಯಾವುದೇ ವಿಧವಾದಂತಹ ರಕ್ಷಣೆಯನ್ನು ಮಹಾರಾಷ್ಟ್ರ ಸರ್ಕಾರ ಕೊಡುತ್ತಿಲ್ಲ. ಇಂತಹ ಒಂದು ಗಂಭೀರವಾದ ಪರಿಸ್ಥಿತಿ ನಿರ್ಮಾಣವಾಗಿರುವಾಗ ಅಲ್ಲಿಂದ ಕರ್ನಾಟಕಕ್ಕೆ ಬರತಕ್ಕ ಕನ್ನಡಿಗರಿಗೆ ಅವರು ಕರ್ನಾಟಕದಲ್ಲಿ ಇಳಿದುಕೊಳ್ಳುವುದಕ್ಕೆ ಉಳಿದುಕೊಳ್ಳುವುದಕ್ಕೆ ನೀವು ಏನೇನು ವ್ಯವಸ್ಥೆಗಳನ್ನು ಮಾಡಿದ್ದೀರಿ? ಮತ್ತು ಈ ರೀತಿ ಆಗಿರುವುದರ ಬಗ್ಗೆ ಕೇಂದ್ರ ಸರ್ಕಾರದ ಜೊತೆ ಮಾತನಾಡಿ. ಮಹಾರಾಷ್ಟ್ರ ಮುಖ್ಯ ಮಂತ್ರಿಗಳು ಈ ರೀತಿ ಮಾತನಾಡಿರತಕ್ಕದ್ದು ಸರಿಯಾಗಿದೆಯೇ? ಹೇಗೆ? ಎನ್ನತಕ್ಕ ವಿಚಾರದ ಬಗ್ಗೆ ತಮ್ಮ ಸರ್ಕಾರ ಏನು ಕ್ರಮ ಕೈಗೊಂಡಿದೆ? ಮಹಾರಾಷ್ಟ್ರ ಮುಖ್ಯ ಮಂತ್ರಿಯವರ ಈ ಹೇಳಿಕೆ ನಿಮ್ಮ ಸರ್ಕಾರದ ಗಮನಕ್ಕೆ ಬಂದಿದೆಯೇ? ನಿಮ್ಮ ಗಮನಕ್ಕೆ ಬಂದಿದ್ದರೆ, ಏನು ಎಚ್ಚರ ವಹಿಸಿದ್ದೀರಿ? ಇದು ಬಹಳ ಗಂಭೀರವಾದಂತಹ ಪರಿಸ್ಥಿತಿ. ಇದರ ಜೊತೆಗೆ ನಾವು ಕೂಡಲೇ ಬೆಳಗಾವಿಯನ್ನು ಮಹಾರಾಷ್ಟ್ರಕ್ಕೆ ತೆಗೆದುಕೊಳ್ಳುತ್ತೇವೆ. ಇದು ನಮ್ಮ ಶಿವಸೇನೆ ಸರ್ಕಾರದ ದೃಢ ನಿರ್ಧಾರ ಎಂದು ಮಹಾರಾಷ್ಟ್ರ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಶಾಸನ ಸಭೆ ಶುರುವಾಗಿ ಮೂರು ದಿನವಾದರೂ ಈ ಬಗ್ಗೆ ಕರ್ನಾಟಕ ಸರ್ಕಾರ ಏನು ಮಾಡಿದೆ? ಕನ್ನಡಿಗರ ಮೇಲೆ ನಡೆದಿರತಕ್ಕ ದಬ್ಬಾಳಿಕೆ ಬಗ್ಗೆಯಾಗಲೀ, ಬೆಳಗಾವಿಯನ್ನು ಪಡೆದೇ ಪಡೆಯುತ್ತೇವೆ ಎನ್ನುವುದರ ಬಗ್ಗೆಯಾಗಲೀ ಈ ಸದನದಲ್ಲಿ ನೀವಾಗಿ ನೀವೇ ಒಂದು ಹೇಳಿಕೆಯನ್ನು ಕೊಡಬೇಕಾಗಿತ್ತು. ಆದರೆ ಇದುವರೆಗೂ ಅಂತಹ ಹೇಳಿಕೆಯನ್ನು ಕೊಟ್ಟಿಲ್ಲ. ಸರ್ಕಾರಕ್ಕೆ ಈ ವಿಷಯದಲ್ಲಿ ಬಂದಿರತಕ್ಕ ಮಾಹಿತಿ ಏನು? ಕನ್ನಡಿಗರಿಗೆ ತಾವು ಯಾವ ರೀತಿ ರಕ್ಷಣೆ ಕೊಡುತ್ತೀರಿ? ಕೇಂದ್ರ ಸರ್ಕಾರದ ಜೊತೆಗೆ ಏನು ಮಾತನಾಡುತ್ತೀರಿ? ಎಂಬುದರ ಬಗ್ಗೆ ತಾವು ಜರೂರಾಗಿ ಒಂದು ಸ್ಪಷ್ಟವಾದಂತಹ ಉತ್ತರ ಕೊಡಬೇಕೆಂದು ನಾನು ಕಳಕಳಿಯಿಂದ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಇನ್ನೂ ಎರಡು ಮೂರು ಮಂದಿ ಮಾನ್ಯ ಸದಸ್ಯರು ಇದೇ ವಿಷಯದ ಬಗ್ಗೆ ಮಾತನಾಡುವವರಿದ್ದಾರೆ. ಎಲ್ಲಾದಕ್ಕೂ ಸೇರಿಸಿ ಮಾನ್ಯ ಮುಖ್ಯ ಮಂತ್ರಿಗಳು ಸದನದಲ್ಲಿಲ್ಲದ ಕಾರಣ ಸರ್ಕಾರದ ಪರವಾಗಿ ಉಪ ಮುಖ್ಯಮಂತ್ರಿಗಳು ಉತ್ತರ ಕೊಡಲಿ.

ಶ್ರೀ ಜೆ.ಹೆಚ್. ಪಟೇಲ್ : ಬೆಳಗಾಂ ಬಗ್ಗೆ ಮಹಾರಾಷ್ಟ್ರ ಮುಖ್ಯ ಮಂತ್ರಿಗಳಲ್ಲ ಹೇಳಿರುವುದು. ಬಾಳಠಾಕ್ರೆಯವರು ಈ ರೀತಿ ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಮಹಾರಾಷ್ಟ್ರ ಮುಖ್ಯ ಮಂತ್ರಿಗಳೇ, ತಮ್ಮ ಪ್ರಮಾಣ ವಚನದ ನಂತರ ಆ ರೀತಿಯ ಹೇಳಿಕೆ ಕೊಟ್ಟಿದ್ದಾರೆ. ಬಾಳಠಾಕ್ರೆಯವರು ಅದಕ್ಕಿಂತ ಇನ್ನೂ ಉನ್ನತವಾದ ಹೇಳಿಕೆ ಕೊಟ್ಟಿದ್ದಾರೆ.

ಅಧ್ಯಕ್ಷರು : ಶೂನ್ಯ ವೇಳೆಯಲ್ಲಿ ಇದೇ ವಿಷಯದ ಬಗ್ಗೆ ಪ್ರಸ್ತಾಪಿಸಲು ಸಿ.ಪಿ.ಎಂ.ಎನ್. ಮಾನ್ಯ ಸದಸ್ಯರಾದ ಶ್ರೀರಾಮರೆಡ್ಡಿಯವರು ಒಂದು ಖಾಸಗಿ ನಿರ್ಣಯ ಕೊಟ್ಟು, ಅದನ್ನು ಸದನದಲ್ಲಿ ಮಂಡಿಸಲು ಅನುಮತಿ ಕೋರಿದ್ದಾರೆ. ಮಾನ್ಯ ಸದಸ್ಯರುಗಳಾದ ವಾಟಾಳ್ ನಾಗರಾಜ್‌ರವರು ಮತ್ತು ಶ್ರೀ ರಾಮರೆಡ್ಡಿಯವರು ಪ್ರಸ್ತಾಪ ಮಾಡತಕ್ಕ ವಿಚಾರಗಳಿರಡಕ್ಕೂ ಒಟ್ಟಾಗಿ ಸೇರಿಸಿ ಸರ್ಕಾರ ಉತ್ತರ ಹೇಳಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್) : ಮಾನ್ಯ ಅಧ್ಯಕ್ಷರೇ, ಖಾಸಗಿ ನಿರ್ಣಯ ಎಂದರೆ ಫೈಡೇ ಅಥವಾ ಸಾಟರ್ ಡೇ ತೆಗೆದುಕೊಳ್ಳಬೇಕಾಗುತ್ತದೆ. ಇಂತಹ ಮಹತ್ವ ಪೂರ್ಣವಾದ ವಿಷಯದ ಬಗ್ಗೆ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಪ್ರಸ್ತಾಪ ಮಾಡಿರುವುದು ಅತ್ಯಂತ ಸಂತೋಷದ ಸಂಗತಿ. ನಾನೂ ಕೂಡ ಇದೇ ವಿಷಯದ ಬಗ್ಗೆ ಒಂದು ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಬೇಕೆಂದಿದ್ದೆ. ವಿಶೇಷವಾಗಿ ಬಾರ್ಡರ್ ಏರಿಯಾಗಳಾದ ಗುಲ್ಬರ್ಗಾ, ಬಿಜಾಪುರ ಬೆಳಗಾಂ ಮತ್ತು ಧಾರವಾಡಗಳಲ್ಲಿ ಇರತಕ್ಕ ಅನೇಕ ಜನ ಇವತ್ತು ಮಹಾರಾಷ್ಟ್ರದಲ್ಲಿದ್ದಾರೆ, ಮುಂಬೈನಲ್ಲಿದ್ದಾರೆ. ಇದು ತಮಗೂ ಗೊತ್ತಿದೆ. ಮಹಾರಾಷ್ಟ್ರದ ಮುಖ್ಯ ಮಂತ್ರಿಗಳು ಈ ರೀತಿಯಾಗಿ ಹೆದರಿಕೆ ಬೆದರಿಕೆ ಹಾಕಿ ಅಲ್ಲಿಂದ ಜನರನ್ನು ಓಡಿಸತಕ್ಕದ್ದು ಮಾಡಿದರೆ ಇದರ ಒಂದು ದುಷ್ಪರಿಣಾಮ ನಾಳೆ ಎಲ್ಲಾ ಕಡೆಯೂ ಆಗುತ್ತದೆ. ಅವರು ಅಲ್ಲಿರತಕ್ಕವರಿಗೆ ಓಡಿಸುತ್ತೇವೆನ್ನುವುದು. ನಾಳೆ ಇಲ್ಲಿ ನಮ್ಮ ರಾಜ್ಯದಲ್ಲಿರತಕ್ಕ ಬೇರೆ ಜನರನ್ನು ಇಲ್ಲಿನ ಚಳುವಳಿಗಾರರು ಅಲ್ಲಿಗೆ ಓಡಿಸುವುದು. ಹೀಗಾದರೆ ಇಡೀ ದೇಶದಲ್ಲಿಯೇ ಒಂದು ಅಶಾಂತಿಯ ವಾತಾವರಣ ನಿರ್ಮಾಣವಾಗುತ್ತದೆ. ಅದಕ್ಕಾಗಿ ದಯವಿಟ್ಟು ಸರ್ಕಾರದವರು ಇದರ ಬಗ್ಗೆ ಏನು ನಿಲುವುದು ತೆಗೆದುಕೊಂಡಿದ್ದಾರೆ ಅಥವಾ ಅವರು ಏನಾದರೂ ಕೇಂದ್ರದ ಜೊತೆ ಮಾತನಾಡುತ್ತಾರೋ, ಅಂತಹ ಹೇಳಿಕೆಗಳನ್ನು ಕೊಡಬಾರದು ಎಂದು ಹೇಳುತ್ತಾರೋ, ಇದರ ಬಗ್ಗೆ ಸರ್ಕಾರ ತನ್ನ ಒಂದು ಸ್ಪಷ್ಟವಾದ ನಿರ್ಧಾರ ತಿಳಿಸಬೇಕಾಗುತ್ತದೆ.

12.40 ಪಿ.ಎಂ.

ಅವರ ಜೊತೆ ಮಾತನಾಡಿ ಇಂತಹ ಹೆದರಿಕೆ ಬೆದರಿಕೆ ಹಾಕುವುದನ್ನು ನಿಲ್ಲಿಸಬೇಕಾಗುತ್ತದೆ. ಇಲ್ಲದಿದ್ದರೆ, ಅದೇ ಪ್ರಕಾರ ಇಲ್ಲೂ ಕೂಡ ಪ್ರತಿಕಾರ ನಡೆಯುವ ಸಂಭವ ಇರುತ್ತದೆ. ಇನ್ನೊಂದು ದುರ್ದೈವ ಏನೆಂದರೆ, ಇಲ್ಲಿರತಕ್ಕ ಎಂ.ಇ.ಎಸ್. ನವರೂ ಕೂಡ ಅದನ್ನು ವೆಲ್‌ಕಮ್ ಮಾಡಿದ್ದಾರೆ. ಅಲ್ಲಿ ಶಿವಸೇನಾ ಬಂದಿದೆ. ಶಿವಸೇನಾ ಮತ್ತು ಬಿ.ಜೆ.ಪಿ.ಯವರು ಅಲಾಯನ್ಸ್ ಮಾಡಿಕೊಂಡಿದ್ದಾರೆ. ಶಿವಸೇನಾದವರು ಮುಖ್ಯ ಮಂತ್ರಿಗಳಾಗಿದ್ದಾರೆ. ಶಿವಸೇನಾದವರು ಬಂದ ಮೇಲೆ ನಮ್ಮ ಸಮಸ್ಯೆ ಬಹಳ ಬೇಗನೆ ಬಗೆಹರಿಯುತ್ತದೆ ಎಂದು ಇಲ್ಲಿನ ಎಂ.ಇ.ಎಸ್.ನವರು ಬೆಳಗಾಂನಲ್ಲಿ ಹೇಳಿಕೆ ಕೊಟ್ಟಿದ್ದಾರೆ. ಆದ್ದರಿಂದ ಇದರ ಬಗ್ಗೆ ತಾವು ಸ್ಪಷ್ಟವಾದ ಹೇಳಿಕೆ ಕೊಟ್ಟರೆ ಒಳ್ಳೆಯದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಅನೇಕ ಬಾರಿ ಈ ವಿಷಯ ಚರ್ಚೆಯಾದಾಗ ಬೆಳಗಾಂ ಸಮಸ್ಯೆ ಬಂದಾಗ ಮಹಾಜನ್ ಆಯೋಗದ ವರದಿಯೇ ಫೈನಲ್, ಅದರ ವಿರುದ್ಧವಾಗಿ ಯಾರಾದರೂ ಮಾತನಾಡಿದರೆ, ಕನ್ನಡಿಗರಿಗೆ ದ್ರೋಹ ಮಾಡಿದಂತಾಗುತ್ತದೆ. ಇದಕ್ಕೆ ನಾವು ಬದ್ಧವಾಗಿದ್ದೇವೆಂದು ಹೇಳಿದ್ದೇವೆ. ಯಾರೇ ಆಗಲಿ ಕನ್ನಡ ನಾಡಿನ ಹಿತಕ್ಕೆ ಧಕ್ಕೆ ಬರುವಂತೆ ಮಾತನಾಡಿದರೆ ಅದನ್ನು ಪ್ರತಿಭಟನೆ ಮಾಡುತ್ತೇವೆ ಮತ್ತು ಮಹಾಜನ್ ವರದಿ ಜಾರಿಗೆ ತರಬೇಕು. ಎಂಬ ಬಗ್ಗೆ ಇಲ್ಲಿರತಕ್ಕ ಯಾವುದೇ ಸದಸ್ಯರ ಭಿನ್ನಾಭಿಪ್ರಾಯ ಇಲ್ಲ. ಇದು ಕನ್ನಡ ನಾಡಿನ ಜನರ ಅಳಿವು ಉಳಿವಿನ ಪ್ರಶ್ನೆ. ನಮ್ಮ ಹೀಗೆ ಎಳೆದುಕೊಂಡು ಹೋಗುತ್ತಿರುವಂಥಾದ್ದು ಅರ್ಥವಿಲ್ಲದ್ದು. ಇನ್ನು

ಎರಡನೆಯದಾಗಿ ಅಲ್ಲಿರತಕ್ಕವರನ್ನು ಓಡಿಸತಕ್ಕ ಭಾವನೆಯನ್ನು ಮೂಡಿಸುವಂತಹ ಹೇಳಿಕೆ ಕೊಡತಕ್ಕ ಬಗ್ಗೆ ಸರ್ಕಾರ ತೀವ್ರವಾಗಿ ಪ್ರತಿಭಟನೆ ಮಾಡಿ ಪತ್ರ ಬರೆಯಬೇಕು. ರಾಜ್ಯದಲ್ಲಿ ಶಾಂತಿ ಸುವ್ಯವಸ್ಥೆಯನ್ನು ಕಾಪಾಡಬೇಕು. ಹಿಂದೆ ನಾವು ಅನುಭವಿಸಿದ್ದೇವೆ, ಕಾವೇರಿ ಗಲಾಟೆ ಸಂದರ್ಭದಲ್ಲಿ ಏನಾಯಿತು ಎಂಬುದು ಎಲ್ಲರಿಗೂ ತಿಳಿದಿದೆ. ಅದು ಆಗದಂತೆ ತಡೆಯಲು ಸರ್ಕಾರ ಪತ್ರ ಬರೆಯಬೇಕು.

ಅಧ್ಯಕ್ಷರು : ಇದು ಉಪಯುಕ್ತವಾದ ಸಲಹೆ.

ಶ್ರೀ ವಾಟಾಳ್ ನಾಗರಾಜ್ : ಬರೀ ಪತ್ರ ಬರೆಯುವುದರಿಂದ ಸಮಸ್ಯೆ ಬಗೆಹರಿಯುವುದಿಲ್ಲ.

SRI QUAMARUL ISLAM : Mr. Speaker Sir, I am coming from Gulbarga and many people of my border area are residing in Bombay since so many years. After the recent dicision and announcement of the Chief Minister of Maharastra, according to my information, so many people have fled and are migrating to our State. I want to know through you, whether the Government has any information about it, Do the Government has any knowledge of it? How many kannadigas have left Bombay?

(INTERRUPTIONS)

SRI B.I. PATIL : We are raising this issue since 39 years. We are living in Belgaum. Our area should go to Maharastra. For pressing that demand people are electing us and sending us to this Assembly. The Marathi speaking border area of Belgaum District should be merged to Maharastra.

ಶ್ರೀ ವಾಟಾಳ್ ನಾಗರಾಜ್ : ಅದು ಹೇಗಾಗುತ್ತದೆ. ಯಾರೂ ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಮಹಾರಾಷ್ಟ್ರ ವಿರಿಯಾ ಎಂದರೇನು?

(ಗೊಂದಲ)

SRI B.I.PATIL : Please give a ruling sir.

ಶ್ರೀ ವಾಟಾಳ್ ನಾಗರಾಜ್ : ಮಹಾರಾಷ್ಟ್ರದ್ದು ಸುಮಾರು 3-4 ಜಿಲ್ಲೆಗಳು ನಮಗೆ ಬರಬೇಕಾಗಿದೆ. ಇವರು ಮಹಾರಾಷ್ಟ್ರ ವಿರಿಯಾ ಎಂದು ನಮ್ಮ ಪ್ರದೇಶಗಳನ್ನು ಹೇಳಿದರೆ ಹೇಗೆ?

(INTERRUPTIONS)

ಶ್ರೀ ವಾಟಾಳ್ ನಾಗರಾಜ್ : ಇವರು ಇರುವುದು ಕರ್ನಾಟಕದಲ್ಲಿ, ಮಹಾರಾಷ್ಟ್ರದಲ್ಲಿ ಅಲ್ಲ. ಶಿವಸೇನಾ ತರಹ ಮಾತನಾಡುವುದನ್ನು ಇಲ್ಲಿ ಒಪ್ಪುವುದಿಲ್ಲ. ಇವರು ಬೇಕಾದರೆ ಮಹಾರಾಷ್ಟ್ರಕ್ಕೆ ಹೋಗಲಿ,. ನಮಗೂ ಅದಕ್ಕೂ ಸಂಬಂಧ ಇಲ್ಲ.

(INTERRUPTIONS)

SRI B.I. PATIL : I want to speak sir, I am living in India. I am not living in Pakistan. For pressing our demand we have come to this Assembly.

(INTERRUPTIONS)

SRI B.I. PATIL : I am not living in Pakistan.

MR. SPEAKER : If this problem is solved you will not be an MLA.

SRI. B. I. PATIL : Sir, the Hon'ble leader of the opposition has said that the Mahajan Committee report is final and binding. We are opposing it. Another point, on Sunday, the Members of Cauvery Kannada Sangha have attacked one of our MLAs in his room. We protest against it sir.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಅಧ್ಯಕ್ಷರೆ, ನಾವು ಒಂದು ಕ್ರೀಯಾಲೋಪವನ್ನು ಎತ್ತುತ್ತಿದ್ದೇನೆ. ಕರ್ನಾಟಕ ರಾಜ್ಯದೊಳಗೆ ಬೆಳಗಾಂ ಎನ್ನತಕ್ಕ ಜಿಲ್ಲೆ ಇದೆ. ಕರ್ನಾಟಕ ರಾಜ್ಯದಲ್ಲಿರತಕ್ಕ ಎಲ್ಲಾ ಜಿಲ್ಲೆಗಳಿಗೂ ನಾವು ಚುನಾವಣೆ ನಡೆಸುತ್ತಿದ್ದೇವೆ. ಚುನಾವಣೆಗಳನ್ನು ನಡೆಸತಕ್ಕ ಸಂದರ್ಭಗಳಲ್ಲಿ ಬೆಳಗಾಂ ಕರ್ನಾಟಕದ ಅವಿಭಾಜ್ಯ ಅಂಗವಾಗಿರತಕ್ಕ ಜಿಲ್ಲೆಗಳಿಂದ ಕೆಲವು ಶಾಸಕರು ಈ ವಿಧಾನ ಸಭೆಗೆ ಆರಿಸಿ ಬಂದಿದ್ದಾರೆ. ಇದು ಕರ್ನಾಟಕದ ವಿಧಾನ ಸಭೆ. ಇಲ್ಲಿರತಕ್ಕ 224 ಸದಸ್ಯರುಗಳೆಲ್ಲರೂ ಕರ್ನಾಟಕ ವಿಧಾನ ಸಭೆಯ ಸದಸ್ಯರುಗಳು. ಈ ಒಂದು ಸಂದರ್ಭದಲ್ಲಿ ಬೆಳಗಾಂನಿಂದ ಬಂದಿರತಕ್ಕ ಮಹಾರಾಷ್ಟ್ರ ಏಕೀಕರಣ ಸಮಿತಿಯ ಸದಸ್ಯರುಗಳು ಈ ಕರ್ನಾಟಕ ವಿಧಾನ ಸಭೆಯ ಸದಸ್ಯರಾಗಲು ತಯಾರಿಲ್ಲ, ನಾವು ಯಾವ ಸ್ಥಾನದಿಂದ ಆರಿಸಿ ಬಂದಿದ್ದೇವೆ ಅದು ಕರ್ನಾಟಕದ ಅವಿಭಾಜ್ಯ ಅನ್ನುವುದನ್ನು ಬಿಟ್ಟು ಬೆಳಗಾಂನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕು ಎನ್ನುವ ಧಾಟಿಯಲ್ಲಿ ಮಾತನಾಡಿದರೆ, ಅದೇ ಅವರ ಇಂಗಿತ ಆದರೆ, ಅದೇ ಅವರ ಮನಸ್ಸಿನ ಕಲ್ಪನೆ ಆಗಿದ್ದರೆ I am telling you Mr. Speaker, this is time that this House shall move a resolution to disqualify them being the Members of this Constituent Assembly.

(INTERRUPTIONS)

SRI B.I. PATIL : I am ready for that. You can take action against me to disquality. I am ready for that. you can take action.

MR. SPEAKER : You please resume your seat.

SRI M.C. NANAIAH : You kindly permit me to speak.

(INTERRUPTIONS)

SRI B.I. PATIL : You take action. I am opposing that. I am ready for that. You can disqualify our membership. If you have guts you disqualify us.

(INTERRUPTIONS)

SRI B.I. PATIL : Continuously we are representing the border area since the re-organisation of states.

MR. SPEAKER : Hon'ble Minister for Parliamentary Affairs has raised a point of order. He is on his legs. Your desire to go away from Karnataka is different thing. When you are in the House you should observe the Rules. If you are unwilling to do that I will have to assert my authority. Please don't do that and don't provoke me to do that.

SRI M.C. NANAIAH : Sir my point of order is precisely towards that authority. Sir, being the Members of this Legislative Assmebly would it be proper and would it be legal on the part of any Member to say that a part of Karnataka shall go to some other state? If such a stand is taken by any Member we shall exercise our inherent power and we should have it to the Hon'ble Speaker to decide. I want to know whether it would be proper for any Member to amke such a statement on the Floor of the House? I want a ruling from the Chair.

SRI B.I. PATIL : I am ready to face any consequences. You can disqualifying our Membership. If you have got powers you can disqualify I am ready for that.

(INTERRUPTIONS)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಎನೋಷನಲ್ ಆಗಿ ನಾವು ಎಲ್ಲಿಗೂ ಹೋಗುವುದು ಬೇಡ.

MR. SPEAKER : Mr. Nanjegowda will speak.

ಶ್ರೀ ಹೆಚ್.ಎನ್. ನಂಜೇಗೌಡ : ಮಾನ್ಯ ಸದಸ್ಯರು ಹೇಳಿರುವುದನ್ನು ಖಂಡಿಸುತ್ತೇನೆ. ಅದಕ್ಕೇನು ತೊಂದರೆ ಇಲ್ಲ. ಬಹುಶಃ ಈ ಸಭೆಯಲ್ಲಿ ಯಾರಾದರೂ ಕೊನೆಯ ಬೆಂಚಿನಲ್ಲಿ ಇರುವ ಸದಸ್ಯರು ಎದ್ದು ಈ ಸದಸ್ಯರನ್ನು ಡಿಸ್‌ಮೆಂಬರ್ ಮಾಡಿ ಎಂದು ಹೇಳಿದ್ದರೆ ಅದು ಸರಿಯಾಗುತ್ತಿತ್ತೋ ಏನೋ. ಆದರೆ ಮಂತ್ರಿಗಳಾಗಿದ್ದುಕೊಂಡು .....

SRI M.C. NANAIAH : As the Minister for Parliamentary Affairs I have said it. I know my authority. and powers. I know limitaions.

ಶ್ರೀ ಹೆಚ್.ಎನ್. ನಂಜೇಗೌಡ : ಕೊನೆಯ ಬೆಂಚಿನವರು ಯಾರಾದರೂ ಹೇಳಿದ್ದರೆ ನಾನು ಏನೂ ಹೇಳುತ್ತಿರಲಿಲ್ಲ.

(ಗೊಂದಲ)

ಡಾ|| ಎಂ. ಶಂಕರ್ ನಾಯಕ್ : ಕೊನೆಯ ಬೆಂಚಿನವರಿಗೆ ಬುದ್ಧಿ ಇಲ್ಲವೇ? ಅಥವಾ ಗೌರವ ಇಲ್ಲವೇ?

ಶ್ರೀ ಕೆ. ಶ್ರೀನಿವಾಸ ಗೌಡ : ಕೊನೆಯ ಬೆಂಚಿನವರು ಎಂದು ಹೇಳುವುದು ಸರಿಯಲ್ಲ.

ಶ್ರೀ ಎಂ. ನಾರಾಯಣ ಸ್ವಾಮಿ : ಕೊನೆಯ ಬೆಂಚಿನ ಸದಸ್ಯರುಗಳ ಬಗ್ಗೆ ಈ ರೀತಿ ಮಾತನಾಡುವುದು ಸರಿಯಲ್ಲ.

(ಗೊಂದಲ)

MR. SPEAKER : Mr. Nanjegowda you have created another problem.

ಅವರು ಬೇರೆ ಉದ್ದೇಶದಿಂದ ಹೇಳಲಿಲ್ಲ. ಡಾ|| ಶಂಕರ್ ನಾಯಕ್‌ರವರೇ, ಕೃಷ್ಣಪ್ಪನವರೇ, ಅಥವಾ ನಾರಾಯಣ ಸ್ವಾಮಿಯವರೇ, ನೀವೇನು ಅಸಮಾಧಾನ

ಪಡಬೇಕಾಗಿಲ್ಲ. ನಾರಾಯಣ ಸ್ವಾಮಿಯವರೇ, ನೀವು ಎರಡನೆಯ ಬಾರಿ ಆರಿಸಿ ಬಂದಿದ್ದೀರಿ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಹೆಚ್.ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿದೆ. ಮಾನ್ಯ ಸದಸ್ಯರೇನಾದರೂ ಇದನ್ನು ಎತ್ತಿದ್ದರೆ, ಅದು ಸದಸ್ಯರ ಅಭಿಪ್ರಾಯವಾಗುತ್ತಿತ್ತು. ಮಾನ್ಯ ಮಂತ್ರಿಗಳು ಎತ್ತಿರುವುದರಿಂದ ಅದು ಸರ್ಕಾರದ ಅಭಿಪ್ರಾಯವಾಗುತ್ತದೆ. ಆ ಉದ್ದೇಶದಿಂದ ನಾನು ಆ ರೀತಿ ಹೇಳಿದೆ. ಈ ಸದನದ ಎಲ್ಲಾ ಸದಸ್ಯರ ಬಗ್ಗೆ ನನಗೆ ತುಂಬಾ ಗೌರವ ಇದೆ. ಈ ಮಾತನ್ನು ಯಾರಾದರೂ ಸದಸ್ಯರು ಹೇಳಿದ್ದರೆ ಅದು ಸದಸ್ಯರ ಅಭಿಪ್ರಾಯವಾಗುತ್ತಿತ್ತು. ಮಂತ್ರಿಗಳು ಹೇಳಿರುವುದರಿಂದ ಅದು ಸರ್ಕಾರದ ಅಭಿಪ್ರಾಯವಾಗುತ್ತದೆ. ನಿನ್ನೆ ಲೋಕಸಭೆಯಲ್ಲಿ ಇದು ಪ್ರಸ್ತಾಪವಾಯಿತು. ಇಲ್ಲಿ ಶ್ರೀ ವಾಟಾಳರು ಈ ವಿಷಯವನ್ನು ಎತ್ತಿ ಅನುಕೂಲ ಮಾಡಿದ್ದಾರೆ. ಲೋಕಸಭೆಯ ಪ್ರೊಸಿಡಿಂಗ್ಸ್ ವರದಿಯಾಗಿರುವ ಜೊತೆಯಲ್ಲಿಯೇ ಮಹಾರಾಷ್ಟ್ರ ಮುಖ್ಯ ಮಂತ್ರಿಯವರು ಹೇಳಿರತಕ್ಕದ್ದು ವರದಿಯಾಗಿದೆ. ರಾಜ್ಯದಲ್ಲಿರತಕ್ಕ ಬೇರೆ ಜನರನ್ನು ಇಲ್ಲಿನ ಚಳುವಳಿಗಾರರನ್ನು ಅಲ್ಲಿಗೆ ಓಡಿಸುವುದು. ಹೀಗಾದರೆ ಇಡೀ ದೇಶದಲ್ಲಿಯೇ ಒಂದು ಅಶಾಂತಿಯ ವಾತಾವರಣ ನಿರ್ಮಾಣವಾಗುತ್ತದೆ. ಅದಕ್ಕಾಗಿ ದಯವಿಟ್ಟು ಸರ್ಕಾರದವರು ಇದರ ಬಗ್ಗೆ ಏನು ನಿಲುವು ತೆಗೆದುಕೊಂಡಿದ್ದಾರೆ ಅಥವಾ ಅವರು ಏನಾದರೂ ಕೇಂದ್ರದ ಜೊತೆ ಮಾತನಾಡುತ್ತಾರೋ ಅಂತಹ ಹೇಳಿಕೆಗಳನ್ನು ಕೊಡಬಾರದು ಎಂದು ಹೇಳುತ್ತಾರೋ, ಇದರ ಬಗ್ಗೆ ಸರ್ಕಾರ ತನ್ನ ಒಂದು ಸ್ಪಷ್ಟವಾದ ನಿರ್ಧಾರ ತಿಳಿಸಬೇಕಾಗುತ್ತದೆ.

ಸಾಮಾನ್ಯ ಸದಸ್ಯರು ಒಬ್ಬರು ಅಥವಾ ಸಾಮಾನ್ಯ ಮನುಷ್ಯ ಇದನ್ನು ಹೇಳಿದ್ದರೆ ಅವರನ್ನು ಟಾಡಾ ಕಾಯಿದೆಯಡಿಯಲ್ಲಿ ಒಳಗೆ ಹಾಕಬಹುದು. ಆದರೆ ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಏನು ಹೇಳಿದ್ದಾರೆ ಅದು ರಾಷ್ಟ್ರದ ಸಮಗ್ರತೆಗೆ ಭಂಗ ತರತಕ್ಕಂಥಾದ್ದು, ನಾವೀಗ ಶ್ಯಾಮ್ ಪ್ರಕಾಶ್ ಮುಖರ್ಜಿಯವರ ಕಾಲಕ್ಕೆ ಹೋಗುತ್ತಾ ಇದ್ದೇವೇನೋ; ಆಗ ಕಾಶ್ಮೀರಕ್ಕೆ ಹೋಗಬೇಕು ಎಂದರೆ ಪಾಸ್ ಪೋರ್ಟ್ ತೆಗೆದುಕೊಂಡು ಮತ್ತು ವೀಸಾ ತೆಗೆದುಕೊಂಡು ಹೋಗಬೇಕಾಗಿತ್ತು. ಈ ವಿಷಯ ನಮ್ಮ ನಿಗದಲ್ಲಿದೆ. ಇದನ್ನು ನಾವು ಯೋಚನೆ ಮಾಡುತ್ತಾ ಇದ್ದೇವೆ ಎನ್ನತಕ್ಕಂಥ ಮಾತನ್ನು ಅವರು ಹೇಳಿದ್ದಾರೆ. ಇವೊತ್ತು ಇವನ್ನೆಲ್ಲಾ ಕೇಳಿಕೊಂಡು, ಏಕೆಂದರೆ ಹೊರದೇಶದಿಂದ ಬರತಕ್ಕಂಥ ಜನರಿಗೆ ಇನ್‌ವೆಸ್ಟ್‌ಮೆಂಟ್ ಮಾಡುವುದಕ್ಕೆ ಬೇಕಾದಷ್ಟು ಅವಕಾಶ ತಾವು ಮಾಡಿಕೊಡುತ್ತಿದ್ದೀರಿ. ನಾಳೆ ಮಹಾರಾಷ್ಟ್ರ ಸರ್ಕಾರದವರು ಏನು ಹೇಳಿದರೂ ಕೂಡ, ಮಾನಸಿಕವಾಗಿ ಅಲ್ಲಿರತಕ್ಕಂಥ ದಕ್ಷಿಣ ಭಾರತದವರು ಅದರಲ್ಲೂ ಕರ್ನಾಟಕದ ಕನ್ನಡಿಗರು ಅಲ್ಲಿರಲು ಆಗದೇ ಇರತಕ್ಕಂಥ ವಾತಾವರಣ ತನಗೆ ತಾನೇ ಸೃಷ್ಟಿಯಾಗತಕ್ಕಂಥ ಪರಿಸ್ಥಿತಿ ಇವೊತ್ತು ಬಂದಿದೆ. ಅವರು ಇಲ್ಲಿ ಬರುವುದಕ್ಕೆ ಇವೊತ್ತು ತಯಾರಾಗುತ್ತಿದ್ದಾರೆ. ಇದಕ್ಕೆ ಸರ್ಕಾರದವರು ದಯಮಾಡಿ ಕಣ್ಣು ಮುಚ್ಚಿಕೊಂಡು ಸುಮ್ಮನೆ ಕೂಡಬೇಡಿ. ಈ ವಿಷಯದಲ್ಲಿ ತಾವು ಏನು ಕ್ರಮ ಕೈಗೊಳ್ಳುತ್ತೀರೆಂದು ತಿಳಿಸಬೇಕು ಎಂದು ನಾನು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಅಧ್ಯಕ್ಷರು : ಶ್ರೀ ರಾಮರೆಡ್ಡಿಯವರು ಈಗಾಗಲೇ ನಿರ್ಣಯ ಕಳುಹಿಸಿದ್ದೀರಿ. ಇಲ್ಲಿ ಹೆಚ್ಚಿ ಚರ್ಚೆಗೆ ಅವಕಾಶವಿಲ್ಲ, ಬೇಗ ಏನು ಹೇಳುತ್ತೀರೋ ಹೇಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ಇಲ್ಲಿ ಎಂಇಎಸ್ ಸದಸ್ಯರು ಹೇಳಿದಂಥ ವಿಷಯ, ಅವರು ಕರ್ನಾಟಕ ರಾಜ್ಯದ ವಿಧಾನಸಭೆಯ ಸದಸ್ಯರಾಗಿದ್ದಾರೆ. ಅವರು ಹೇಳಿದಂಥ ವಿಷಯ ನಮ್ಮ ಬೇಡಿಕೆ ಇದೆ ಎನ್ನತಕ್ಕಂಥಾದ್ದು. ಇದಕ್ಕೆ ಮಾನ್ಯ ಮಂತ್ರಿಗಳು ಅವರನ್ನು ಡಿಸ್‌ಕ್ವಾಲಿಫೈ ಮಾಡಬೇಕು ಎಂದು ಹೇಳಿದರು. ಅದಕ್ಕೆ ಬಂಡಿತ ನಮ್ಮ ವಿರೋಧವಿದೆ. ಅವರು ಹೇಗೆ ಕರ್ನಾಟಕ ರಾಜ್ಯದ

ವಿಧಾನಸಭೆಯ ಸದಸ್ಯರು ಎಂದು ಸಮರ್ಥನೆ ಮಾಡಿದರೋ, ಕರ್ನಾಟಕ ರಾಜ್ಯದ ಮತದಾರರ ಪಟ್ಟಿಯಲ್ಲಿ ಇರತಕ್ಕಂಥ ಜನರೇ ಆಯ್ಕೆ ಮಾಡಿದ್ದಾರೆ ಎನ್ನತಕ್ಕಂಥದ್ದನ್ನು ಮಾನ್ಯ ಮಂತ್ರಿಗಳು ಗಮನಿಸಬೇಕು. ಎರಡನೆಯದು, ಕರ್ನಾಟಕ ರಾಜ್ಯ ವಿಧಾನಭೆಯ ಸದಸ್ಯರಾಗಿ ನಾವು ಬಂದಿದ್ದೇವೆ ಎಂದು ಅವರು ಹೇಳಿದ್ದಾರೆ. ಅದನ್ನು ಅವರು ನಮ್ಮ ಬೇಡಿಕೆ ಎಂದು ಹೇಳಿದ್ದಾರೆ. ಇಷ್ಟೆ ಇಲ್ಲದಿದ್ದರೆ ಅವರು ಮಹಾರಾಷ್ಟ್ರಕ್ಕೆ ಹೋಗಬಹುದು, ಅದು ಅವರಿಗೆ ಬಿಟ್ಟ ವಿಷಯ, ಅದು ಅವರಿಗೆ ಸಂಬಂಧಪಟ್ಟಿದ್ದುದು. ಆದರೆ ಆಯ್ಕೆಯಾದಂಥ ಸದಸ್ಯರನ್ನು ಡಿಸ್‌ಕ್ವಾಲಿಫೈ ಮಾಡುವ ರೀತಿಯಲ್ಲಿ ಅವರು ಸದನದಲ್ಲಿ ನಡೆದುಕೊಂಡಿಲ್ಲ. ಈ ರೀತಿಯಾದಂಥ ಒಂದು ಧೋರಣೆಯನ್ನು ಸರ್ಕಾರ ತೆಗೆದುಕೊಂಡರೆ ನಾಳೆ ದಿವಸ ಹಲವಾರು ಗಂಭೀರವಾದಂಥ ಗಡಿ ಸಮಸ್ಯೆಗಳಿಗೆ ಎಡೆಮಾಡಿಕೊಟ್ಟಂತಾಗುತ್ತದೆ.

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೇ, ಈ ದಿನ

(ಗೊಂದಲ)

MR. S. RAJENDRAN : Respected Speaker Sir, Hon'ble Minister has just explained, for the border area, aks them to get out of the session. It affects to the entire border area people surrounding the State, living in the same state e.g. K.G.F. It is the surrounding place only. Tomorrow you may say get out of this session. The Government has not come forward to solve the problems of the border area people. It has affected us. It is a shame on the part of the Govenment.

MR. SPEAKER . Nothing will go in record.

ಶ್ರೀ ವಾಟಾಳ್ ನಾಗರಾಜ್ : ಕೆ.ಜಿ.ಎಫ್. ತಮಿಳುನಾಡು ಎಂದು ಹೇಳಿದರೆ ನಾವು ಹೇಳಲೇಬೇಕಾಗುತ್ತದೆ. ಕೆ.ಜಿ.ಎಫ್. ಕರ್ನಾಟಕದ್ದು ಎಂದು ಹೇಳಿದರೆ ನಾವು ಕೇಳುವುದಿಲ್ಲ. ಆದರೆ ಕೆ.ಜಿ.ಎಫ್. ತಮಿಳುನಾಡು ಅಂತ ಹೇಳಿದರೆ ನಾವು ಕೇಳಲೇಬೇಕಾಗುತ್ತದೆ.

(ಗೊಂದಲ)

ಶ್ರೀ ಎಸ್. ರಾಜೇಂದ್ರನ್ : ನಾವು ತಮಿಳು ಮಾತನಾಡಿದರೂ ಸಹಿತ ನಾವು ಕನ್ನಡಿಗರು. The Government is not interested to put their head to solve the problems of the border area people . You create the problem and never bother us.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಇವ್ಮೊತ್ತು ಕರ್ನಾಟಕದ ಭೂಮಿಯಲ್ಲಿ ಕರ್ನಾಟಕದವರಿಂದ ಮತ ಪಡೆದು.....

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಈ ರಾಜ್ಯದ ಮತದಾರರದಿಂದ ಮತ ಪಡೆದು ಬೇರೆ ರಾಜ್ಯ ಎಂದು ಹೇಳುವುದಾದರೆ ಅವರು ಹೊರಗೆ ಹೋಗಲೇಬೇಕು.

ಶ್ರೀ ಎಸ್. ರಾಜೇಂದ್ರನ್ : ನಾವು ಕನ್ನಡದವರೇ, ತಮಿಳು ಮಾತನಾಡುತ್ತೇವೆ.. We are from Karnataka only. You cannot use that word for the border area people.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಅವರು ಉದ್ದೇಶ ಪೂರ್ವಕವಾಗಿ ಕೆ.ಜಿ.ಎಫ್. ಅನ್ನು ತಮಿಳುನಾಡು ಎಂದು ಹೇಳುತ್ತಿದ್ದಾರೆ. ಕರ್ನಾಟಕದ ಬಗ್ಗೆ ಸ್ವಲ್ಪವೂ ಚಿಂತನೆ ಇಲ್ಲ. ಇದು ಅಪಾಯಕಾರಿ ಬೆಳವಣಿಗೆ ಎಂದು ಹೇಳುತ್ತಿದ್ದೇನೆ.

SRI. S. RAJENDRAN : We are from Karnataka only. You cannot use that word. The Government is..

(INTERRUPTIONS)

MR. SPEAKER : Nothing will go on record. You please resume your seat. I am asking you to resume your seat.

ಶ್ರೀ ಹೆಚ್.ಡಿ. ದೇವೇಗೌಡ : ಸನ್ಮಾನ್ಯ ಅಧ್ಯಕ್ಷರೇ, ಇದೊಂದು ಅತ್ಯಂತ ಸೂಕ್ಷ್ಮವಾದ ವಿಷಯ. ನಮ್ಮ ರಾಷ್ಟ್ರದ ರಾಜಕಾರಣದಲ್ಲಿ ಮೊದಲನೆಯ ಬಾರಿಗೆ ಇಂಥ ಒಂದು ಸನ್ನಿವೇಶ ಉದ್ಭವವಾಗಿದೆ. ದುರಾದೃಷ್ಟ, ಈ ಸನ್ನಿವೇಶದಲ್ಲಿ, ಈ ಸದನದಲ್ಲಿ ಈ ವಿಷಯವನ್ನು ಮಾನ್ಯ ಹಿರಿಯ ಸದಸ್ಯರಾದ ವಾಟಾಳ್ ನಾಗರಾಜ್ ರವರು ಹಾಗೂ ಇನ್ನಿತರ ಸ್ನೇಹಿತರುಗಳು ಎತ್ತಿ ಆದರಲ್ಲೂ ನಮ್ಮ ಕನ್ನಡನಾಡಿನ ನಮ್ಮ ಸಹೋದರರು ಏನು ಅಲ್ಲಿ ಇದ್ದಾರೆ ಅವರಿಗೆ ಉಂಟಾಗಿರತಕ್ಕಂಥ ತೀವ್ರತರವಾದಂಥ ಮುಂದೆ ಏನಾಗಬಹುದು ಎನ್ನತಕ್ಕಂಥ ಒಂದು ಅಸ್ಥಿರತೆ ಮತ್ತು ಭಯ ಎರಡೂ ಅವರನ್ನು ಕಾಡುತ್ತಿದೆ. ಈ ಸಂದರ್ಭದಲ್ಲಿ ರಾಜ್ಯಸರ್ಕಾರ ಕೇಂದ್ರದ ಗೃಹ ಮಂತ್ರಿಗಳಿಗೆ ಹಾಗೂ ಮಹಾರಾಷ್ಟ್ರದ ಮುಖ್ಯಮಂತ್ರಿಗಳಿಗೆ ಈ ವಿಷಯದಲ್ಲಿ ನಾವು ಪತ್ರ ಬರೆದಿದ್ದೇವೆ. ಅವರಿಂದ ಏನು ಉತ್ತರ ಬರುತ್ತದೆ ಎಂಬುದನ್ನು ನಿರೀಕ್ಷಣೆ ಮಾಡಬೇಕಾಗುತ್ತದೆ.

ಒಂದು ಪತ್ರಿಕೆಯಲ್ಲಿ ನಾನು ಹಾಗೆ ಹೇಳಲೇ ಇಲ್ಲ ಎಂದು ಮುಖ್ಯಮಂತ್ರಿಗಳು ಹೇಳಿದ್ದಾರೆ. ಆದರೆ ಒಂದು ರಾಜಕೀಯ ಪಕ್ಷದ ಮುಖಂಡರು, ಅವರು ಮುಖ್ಯಮಂತ್ರಿಗಳಗಾ ಪ್ರಮಾಣ ವಚನ ಸ್ವೀಕಾರ ಮಾಡಿದಂಥ ಕಾಲದಲ್ಲಿ ಹೇಳಿದರು ಎನ್ನುವ ಒಂದು ಅಭಿಪ್ರಾಯ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಅದರ ಬಗ್ಗೆ ಸ್ವಾಭಾವಿಕವಾಗಿ ಇಂಥ ಒಂದು ಸನ್ನಿವೇಶದಲ್ಲಿ ಜನಸಾಮಾನ್ಯರಲ್ಲಿ ಸಂಶಯ ಉಳಿಯಲಿಕ್ಕೆ ಸಾಧ್ಯವಿದೆ. ಈ ವಿಷಯವನ್ನೇ ನಿನ್ನೆ ಲೋಕಸಭೆಯಲ್ಲಿ ಎಲ್ಲಾ ಪಕ್ಷದ ಸದಸ್ಯರು ತೀವ್ರವಾಗಿ ಅದನ್ನು ವಿರೋಧ ಮಾಡುವುದು ಅಷ್ಟೇ ಅಲ್ಲ, ಖಂಡನೆಯನ್ನು ಮಾಡಿದ್ದಾರೆ. ಈ ದೇಶದ ಐಕ್ಯತೆಗೆ ಧಕ್ಕೆಯನ್ನು ಬರತಕ್ಕಂಥ ರೀತಿಯಲ್ಲಿ ಯಾವುದೇ ರಾಜ್ಯ ಸರ್ಕಾರ ಪ್ರಯತ್ನ ಮಾಡಿದಾಗಲೂ ಅದಕ್ಕೆ ನಮ್ಮ ರಾಜ್ಯಾಂಗದ ಚೌಕಟ್ಟಿನಲ್ಲಿ ಕೊನೆಯ ಅಸ್ತ್ರವನ್ನು ಬಳಕೆ ಮಾಡತಕ್ಕಂಥದ್ದಕ್ಕೆ ಬಹುಶಃ ಕೇಂದ್ರ ಸರ್ಕಾರಕ್ಕೆ ಅಧಿಕಾರ ಇದೆ. ಅಲ್ಲಿಗೆ ನಾನು ನಿಲ್ಲಿಸುತ್ತೇನೆ.

ಆದರೆ ಇದರ ಬಗ್ಗೆ ಕೇಂದ್ರಸರ್ಕಾರ ಕೂಡ ಗಮನವನ್ನು ಹರಿಸಿದೆಯೆಂದು ನಾನು ಭಾವಿಸುತ್ತೇನೆ. ನಮ್ಮ ಮನಸ್ಸಿನಲ್ಲಿರತಕ್ಕಂಥ ಆತಂಕ ಏನಿದೆ ಆ ಆತಂಕವನ್ನು ನಿವಾರಣೆ ಮಾಡಿಕೊಳ್ಳಲಿಕ್ಕೆ ಆ ರಾಜ್ಯ ಮುಖ್ಯಮಂತ್ರಿಗಳು, ಅವರು ಯಾವುದೇ ಪಕ್ಷದಲ್ಲಿ ಇರಲಿ ಅದು ನನಗೆ ಸಂಬಂಧವಿಲ್ಲ. ಆ ಒಂದು ರಾಜ್ಯದ ಮುಖ್ಯಮಂತ್ರಿಗಳು ಹೇಳಿದ್ದಾರೆ. ಆದರೆ ಆ ಸರ್ಕಾರದ ಧೋರಣೆ ಬಗ್ಗೆ ಸ್ಪಷ್ಟೀಕರಣ ಮಾಡಬೇಕಾಗುತ್ತದೆ.

ಇವೊತ್ತು ಅಲ್ಲಿ ಇರತಕ್ಕಂಥ ವಿವಿಧ ಭಾಷೆಗಳನ್ನು ಆಡತಕ್ಕಂಥ ಜನರಿದ್ದಾರೆ ಅವರಿಗೆ ಯಾವ ರೀತಿ ರಕ್ಷಣೆ ಕೊಡುತ್ತೀರಿ ಎನ್ನುವ ಬಗ್ಗೆ ದಯಮಾಡಿ ನಿಮ್ಮ ನಿಲುವು ಏನು ಎನ್ನುವುದರ ಬಗ್ಗೆ ದಯಮಾಡಿ ನಿಮ್ಮ ನಿಲುವು ಏನು ಎನ್ನುವುದರ ಬಗ್ಗೆ ನೀವು ತಿಳಿಸಬೇಕು ಎಂದು ಹೇಳಿದ್ದೇವೆ. ಅವರಿಂದ ನಮಗೆ ಉತ್ತರ ಬಂದಮೇಲೆ ಈ ಸದನದ ಗಮನಕ್ಕೆ ತರುತ್ತೇನೆ. ಅಷ್ಟೇ ಅಲ್ಲ, ಕೇಂದ್ರದ ಗೃಹ ಸಚಿವರಿಗೂ ಈ ವಿಷಯದಲ್ಲಿ ನಮ್ಮ ಆತಂಕವನ್ನು ವ್ಯಕ್ತಪಡಿಸಿದ್ದೇವೆ. ಇವೊತ್ತು ಕೂಡ ಅದೇ ಕೆಲಸವನ್ನು ನಾವು ಮಾಡಿದ್ದೇವೆ. ನಿನ್ನೆ ಪಾರ್ಲಿಮೆಂಟಿನಲ್ಲಿ ಈ ವಿಷಯದ ಬಗ್ಗೆ ಪ್ರತಿಯೊಬ್ಬರಿಂದಲೂ ತೀವ್ರವಾದಂಥ ಪ್ರತಿಭಟನೆ ವ್ಯಕ್ತವಾಯಿತು. ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಸ್ವಲ್ಪ ಮಟ್ಟಿಗೆ ಒಂದೊಂದು ಪತ್ರಿಕೆಯಲ್ಲಿ ಒಂದೊಂದು ರೀತಿಯಾದಂಥ ಹೇಳಿಕೆಯನ್ನು ಕೊಡುತ್ತಿದ್ದಾರೆ. ಇಲ್ಲದಿದ್ದರೆ ಅವರ ನಿಲುವು ಏನು ಎಂದು ಕೇಳಬೇಕಾದ ಅವಶ್ಯಕತೆ ಇರಲಿಲ್ಲ, ಇಷ್ಟನ್ನು ಮಾತ್ರ ಈ ಸಂದರ್ಭದಲ್ಲಿ ಹೇಳುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ಇಂಥ ಸೂಕ್ಷ್ಮವಾದ ವಿಷಯದಲ್ಲಿ ತಾವು ಇಡೀ ಸದನ ಬಹುಶಃ ಈ ಒಂದು ವಿಧಾನಸಭೆಯಲ್ಲಿ ಅದು ನೀರಾವರಿ ಸಮಸ್ಯೆ ಇರಲಿ, ನಮ್ಮ ರಾಜ್ಯದ ಹಕ್ಕನ್ನು ಉಳಿಸಿಕೊಳ್ಳತಕ್ಕಂಥ ಕಾಲದಲ್ಲಿ ಗಡಿ ಸಮಸ್ಯೆ ಇರಲಿ, ನಾವು ಯಾವುದೇ ಪಕ್ಷ ರಾಜಕಾರಣವನ್ನು ಒಡ್ಡದೇ ನಾವೆಲ್ಲಾ ಒಂದುಗೂಡಿ ಏಕವ್ಯಕ್ತಿಯಾಗಿ ನಮ್ಮ ನಿಲುವನ್ನು ಪ್ರದರ್ಶನ ಮಾಡಿಕೊಂಡು ಬಂದಿದ್ದೇವೆ. ಆದುದರಿಂದ ಈ ಸಂದರ್ಭದಲ್ಲಿ ಇಷ್ಟೇ ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಬೆಳಗಾಮಿನ ಬಗ್ಗೆ ರಾಜ್ಯದ ನಿಲುವು ಯಾವುದೇ ಕಾಲದಲ್ಲಿ ಬದಲಾವಣೆ ಆಗಿಲ್ಲ, ಇವೊತ್ತು ಕೂಡ ಆ ನಿಲುವಿಗೆ ನಾವು ಬದ್ಧರಾಗಿದ್ದೇವೆ. ಮಹಾಜನ್ ಕಮಿಷನ್ ವರದಿ ಆಧಾರದ ಮೇಲೆ ಏನು ನಿರ್ಣಯ ಆಗಿದೆಯೋ ಆ ನಿರ್ಣಯಕ್ಕೆ ಇವೊತ್ತು ಯಾವುದೇ ತರವಾದಂಥ ರಾಜಕೀಯ ಸನ್ನಿವೇಶದಲ್ಲಿ ಅದನ್ನು ಬದಲಾವಣೆ ಮಾಡುವುದಕ್ಕೆ ನಾವು ಬಿಡುವುದಿಲ್ಲ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ನಮ್ಮ ಎಂ.ಇ.ಎಸ್.ನ ಸದಸ್ಯರೂ ಮುಖಂಡರೂ ಆದಂಥ ಶ್ರೀ ಪಾಟೀಲ್‌ರವರು ಹೇಳಿದಂಥ ಮಾತನ್ನು ಕೇಳಿದೆ.

ಆದರೆ ಕಾನೂನು ಸಂಸದೀಯ ಸಚಿವರು ತಾಂತ್ರಿಕವಾಗಿ ಈ ಸದನಕ್ಕೆ ಇರುವ ಅಧಿಕಾರದ ಬಗ್ಗೆ ಮಾತನಾಡಿದರೆ ಹೊರತು, ಹಾಗೆ ಇದನ್ನು ಲಾಜಿಕಲ್ ಆಗಿ ತೆಗೆದುಕೊಂಡು ಹೋಗುವುದಕ್ಕೆ ಆಗುವುದಿಲ್ಲ, ನಾವು ಈ ಸದನದಲ್ಲಿ ಕೆಲಸ ಮಾಡುವಾಗ ಒಂದು ಒಳ್ಳೆಯ ವಾತಾವರಣವನ್ನು ನಿರ್ಮಾಣ ಮಾಡಿ ಕೆಲಸ ಮಾಡಬೇಕಾಗುತ್ತದೆ. ಸ್ವಾಭಾವಿಕವಾಗಿ ತಾವು ಈ ಸದನಕ್ಕೆ ಗೆದ್ದು ಬರಬೇಕಾಗಿದ್ದರೆ ಆ ಇಸ್ಯು ಬಿಟ್ಟರೆ ಗೆದ್ದು ಬರುವುದಕ್ಕೆ ಆಗುವುದೇ ಇಲ್ಲ. ನಿಮಗೆ ಉಪಯೋಗವಾಗುವುದಾದರೆ ಅದನ್ನು ರಾಜಕೀಯವಾಗಿ ಬಳಸಿಕೊಳ್ಳಬೇಕಾಗುತ್ತದೆ. ಕಳೆದ 20-25 ವರ್ಷಗಳಿಂದಲೂ ನಾವು ಇದನ್ನು ನೋಡುತ್ತಿದ್ದೇವೆ. 1956ರಲ್ಲಿ ಸ್ಟೇಟ್ ರಿ ಆರ್ಗನೈಸೇಷನ್ ಆದ ಮೇಲೆ 1962ರಲ್ಲಿ ಮೊದಲನೆಯ ಸಲ ನಾನು ಈ ಮನೆಗೆ ಬಂದಿದ್ದೆ. ಅಲ್ಲಿಂದಲೂ ಆ ನಿಲುವನ್ನು ಪ್ರತಿಪಾದನೆ ಮಾಡಿರತಕ್ಕಂಥವರು ಕೆಲರು ಸಾರಿ ಸೋತಿದ್ದಾರೆ. ಮತದಾರರೆಲ್ಲ ಓಟು ಮಾಡಿಲ್ಲ, ನಿಷ್ಪಾಕ್ಷಪಾತಿಯಲ್ಲಿ ನೀವು ಎರಡು ಸಾರಿ ಗೆದ್ದು ಬಂದಿದ್ದೀರಿ. ಆದರಿಂದ ಈ ನಿಲುವನ್ನು ಸದಾ ಕಾಲ ಮರಾಠಿ ಮಾತನಾಡತಕ್ಕಂತಹ ನಮ್ಮ ಸಹೋದರರು ನಮ್ಮ ರಾಜ್ಯದಲ್ಲಿ ಯಾರು ಇದ್ದಾರೆ ಅವರೂ ಕೂಡ ಈ ನಿಲುವನ್ನು ಒಪ್ಪಿಕೊಳ್ಳುವುದಕ್ಕೆ ಸದಾಕಾಲ ಅವಕಾಶವಿಲ್ಲ, ಎನ್ನುವುದನ್ನು ತೋರಿಸಿಕೊಟ್ಟಿದ್ದಾರೆ.

ನಮ್ಮ ಅಣ್ಣ ತಮ್ಮಂದಿರು ಸಹೋದರ ಮನೋಭಾವನೆಯಿಂದ ನಮ್ಮಲ್ಲಿ ನಮ್ಮವರೇ ಆಗಿ ಒಟ್ಟಾಗಿ ನಾವು ಬಾಳಬೇಕು ಎನ್ನತಕ್ಕಂತಹ ವಾತಾವರಣ ನಿರ್ಮಾಣ ಮಾಡಲಿಕ್ಕೆ ಮರಾಠಿ ಭಾಷೆಯನ್ನು ಆಡತಕ್ಕಂಥವರು ನಮ್ಮ ರಾಜ್ಯದಲ್ಲಿ ಯಾರು ಇದ್ದಾರೆ

ಇವರು ಈಗಾಗಲೇ ತೋರಿಸಿಕೊಟ್ಟಿದ್ದಾರೆ. ಅದರಿಂದ ನೀವು ಸದಾ ಕಾಲ ಈ ಇಸ್ಯೂವನ್ನ ಉಪಯೋಗ ಮಾಡಿಕೊಂಡು ಈ ಮನೆಗೆ ಬರುವುದಕ್ಕೆ ಕಷ್ಟವಾಗಬಹುದು. ನೀವು ಗಡಿಪ್ರದೇಶದಲ್ಲಿರತಕ್ಕಂತ ಜನತೆಗೆ ಅಲ್ಲಿ ಅಗತ್ಯವಾದ ಅಭಿವೃದ್ಧಿ ಕಾರ್ಯಗಳ ಬಗ್ಗೆ ಅಥವಾ ಅವರ ದುಃಖದುಮ್ಮಾನಗಳ ಬಗ್ಗೆ ಅವರ ಸಮಸ್ಯೆಗಳು ಏನಾದರೂ ಇದ್ದರೆ ಅವುಗಳನ್ನು ಹೇಳುವುದಕ್ಕೆ ಹೆಚ್ಚು ಹೆಚ್ಚು ಅವಕಾಶಗಳ ಬಗ್ಗೆ ಅವರ ಸಮಸ್ಯೆಗಳು ಏನಾದರೂ ಇದ್ದರೆ ಅವುಗಳನ್ನು ಹೇಳುವುದಕ್ಕೆ ಹೆಚ್ಚು ಹೆಚ್ಚು ಅವಕಾಶವನ್ನು ಉಪಯೋಗ ಮಾಡಿಕೊಳ್ಳುವುದು. ಸೂಕ್ತ ಎನ್ನುವ ಮಾತನ್ನು ಹೇಳುತ್ತೇನೆ.

ಬಹುಶಃ ಬಾರ್ಡರ್ ಡೆವಲಪ್‌ಮೆಂಟ್ ಪ್ರೋಗ್ರಾಮನ್ನು ಹೊಸದಾಗಿ ಜಾರಿಗೆ ತಂದಂತೆ ಕಾಣುತ್ತದೆ. ಇದು ಹಿಂದೆ ಇರಲಿಲ್ಲ. ಆದರಿಂದ ಇಂತಹ ಸಮಸ್ಯೆಗಳಿಗೆ ನೀವು ಹೆಚ್ಚು ಕಾಲ ವಿನಿಯೋಗ ಮಾಡಿದರೆ ಒಳ್ಳೆಯದು. ನನ್ನ ಸಲಹೆ ಇಷ್ಟೆ. ಇವತ್ತು ರಾಜ್ಯದಲ್ಲಿ ಒಳ್ಳೆಯ ವಾತಾವರಣವಿದೆ. ದಯಮಾಡಿ ಇದನ್ನು ಕದಡಲಿಕ್ಕೆ ಹೋಗಬೇಡಿ ಎಂದು ಸವಿನಯವಾಗಿ ಪ್ರಾರ್ಥನೆ ಮಾಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ಅವಶ್ಯಕತೆ ಬಿದ್ದರೆ, ಸದನದ ಎಲ್ಲಾ ಪಕ್ಷದ ನಾಯಕರುಗಳನ್ನು ಕರೆಯಿಸಿ ತಮ್ಮ ಕೊಠಡಿಯಲ್ಲಿ ಕುಳಿತು ನಾವು ಯಾವ ರೀತಿ ನಿರ್ಣಯವನ್ನು ತೆಗೆದುಕೊಳ್ಳಬೇಕು ಎಂಬುದನ್ನು ಚರ್ಚೆ ಮಾಡಿ ಸರ್ವ ಸಮ್ಮತವಾದಂತಹ ಒಂದು ನಿಲುವನ್ನು ಈ ಸಭೆ ವ್ಯಕ್ತಪಡಿಸಬೇಕು ಎನ್ನುವುದಾದರೆ ಅದನ್ನು ಮಾಡೋಣ ಎಂದು ತಮ್ಮಲ್ಲಿ ಕೈಮುಗಿದು ಪ್ರಾರ್ಥನೆ ಮಾಡಿ, ಈ ವಿಷಯವನ್ನು ಇವತ್ತಿಗೆ ಮುಂದುವರೆಸುವುದು ಸೂಕ್ತವೆಂದು ನಾನು ಭಾವಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಸಭಾಧ್ಯಕ್ಷರೇ, ಮುಖ್ಯವಾಗಿ ಎರಡು ಪ್ರಮುಖ ಪ್ರಶ್ನೆಗಳು ಉದ್ಭವವಾಗಿವೆ. ಇದರ ಬಗ್ಗೆ ಇವತ್ತು ಸಭಾ ನಾಯಕರು ಏನು ಉತ್ತರ ಕೊಟ್ಟಿದ್ದಾರೆ. ಅದು ಸಮಾಧಾನಕರವಾಗಿದೆ. ಆದರೆ, ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಏನು ಪ್ರಶ್ನೆ ಎತ್ತಿದ್ದಾರೆ ಇದಕ್ಕಿಂತ ಗಂಭೀರವಾದ ಪ್ರಶ್ನೆ ಮತ್ತೊಂದಿಲ್ಲ. ಇದನ್ನು ಚಿಗುರಿನಲ್ಲೇ ಕತ್ತರಿಸಬೇಕೆಂದು ನಾನು ಹೇಳಿದ್ದುದು. We will have to make a resolution here. Let the country knows about it.

ತಾವು ದಯಮಾಡಿ ಇಲ್ಲಿ ನಿರ್ಣಯ ತರಬೇಕು. we have to express the concern of the entire House about the expression made by the Hon. Chief Minister of Maharashtra. We have to make a Resolution and nothing short of it. ತಾವು ಪತ್ರ ಬರೆದಿದ್ದೀರಿ ಅದು ಸರಿ. However, I think, the entire House should unanimously pass a Resolution expressing the concern over this.

ಅಷ್ಯೂರ್ ಮಾಡಬೇಕು. ಮತ್ತು ನಮ್ಮ ಸಂಸದೀಯ ಮಂತ್ರಿಗಳು ಏನು ಹೇಳಿದರು. ಬಹುಶಃ ಅದು ರಾಜಕೀಯ ಹೇಳಿಕೆಯಾದರೆ ಸರಿ, ಆದರೆ ತಾಂತ್ರಿಕವಾಗಿ ಹಾಗೂ ಕಾನೂನು ಪ್ರಕಾರ ಅಂತಹ ಹೇಳಿಕೆ ಬರಬಾರದು. ಏಕೆಂದರೆ ಈ ಹೇಳಿಕೆಗೂ ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಹೇಳಿದಂತಹ ಹೇಳಿಕೆಗೂ ವ್ಯತ್ಯಾಸ ಕಂಡುಬರುವುದಿಲ್ಲ. ಅಂತಹ ಭಾವನೆಗಳು ಈ ಸದನದಿಂದ ಹೊರಗೆ ಹೋಗುವಂತಹದ್ದು ಸೂಕ್ತವಲ್ಲ.

ಅಧ್ಯಕ್ಷರು : ಅವರಷ್ಟೇ ಅಲ್ಲ, ನಮಗೂ ಮಾತನಾಡುವುದಕ್ಕೆ ಬರುತ್ತದೆಂದು ಹೇಳಿದ್ದಷ್ಟೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಹಾರಾಷ್ಟ್ರ ಮುಖ್ಯಮಂತ್ರಿಗಳು ಏನು ಹೇಳಿಕೆ ಕೊಟ್ಟರು ಅದೇ ಬಾಣದಲ್ಲಿ ಇಲ್ಲಿ ಹೇಳಿಕೆಯನ್ನು ಕೊಡುವುದನ್ನು ತಾವು ಇಲ್ಲಿ ತಡೆಯಬೇಕು.

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೇ, ಇಲ್ಲಿ ಅವರು ಮಾತನಾಡಿದ ಭಾಷಣ ಮಾತನಾಡಬಾರದು. ನಾವು ಅವರಿಗಿಂತ ಬಹಳ ಕಲ್ಚರ್ಡ್ ಎಂತೆಲ್ಲಾ ಹೇಳುವುದನ್ನು ಒಪ್ಪುತ್ತೇನೆ. ಆದರೆ ಈ ಒಂದು ರಾಜ್ಯದ ಮುಖ್ಯಮಂತ್ರಿಗಳು ಈ ರೀತಿ ಹೇಳಬಾರದು ಎನ್ನುವುದು ಎಲ್ಲರಿಗೂ ಗೊತ್ತಾಗುತ್ತದೆ ಮತ್ತು ಅವರ ಭಾಷೆಯನ್ನೂ ಮಾತನಾಡುವುದಕ್ಕೆ ನಮಗೆ ಬರುತ್ತದೆ ಎನ್ನುವುದನ್ನು ಹೇಳಬೇಕಾಗುತ್ತದೆ. ನಾವು ಸುಮ್ಮನೆ ಇರುವುದೇ ಒಂದು ದೊಡ್ಡ ಸಂಸ್ಕೃತಿ ಅಂತಲ್ಲ. ಆದರೆ ಕಾನೂನು ಪ್ರಕಾರ ಸಂವಿಧಾನದಲ್ಲಿ ರಾಜ್ಯಾಂಗದ ಪ್ರಕಾರ ಅವರು ಪ್ರಮಾಣ ವಚನ ಸ್ವೀಕರಿಸಿದ್ದಾರೆ. ರಾಜ್ಯಾಂಗದ ಪ್ರಕಾರ ಕರ್ನಾಟಕ ನಮ್ಮ ರಾಜ್ಯ ತಾನೆ?

ಶ್ರೀ ಎಂ. ವೀರಪ್ಪ ಮೊಯಿಲಿ : ಒಂದು ಅಭಿಪ್ರಾಯ ವ್ಯಕ್ತಪಡಿಸಿದ ಕೂಡಲೇ ಒಬ್ಬ ಸದಸ್ಯನನ್ನು ಹೊರಗೆ ದೂಡಲಿಕ್ಕಾಗುವುದಿಲ್ಲ.

ಶ್ರೀ ಜೆ.ಹೆಚ್. ಪಟೇಲ್ : ಸಂವಿಧಾನದ ಪ್ರಕಾರ ಅವರು ಈ ಸದನದ ಸದಸ್ಯರಾಗಿ ಈ ಸದನದ ಅಥಾರಿಟಿಯನ್ನು ಡಿಫೈನ್ ಮಾಡಕೂಡದು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮುಖ್ಯಮಂತ್ರಿಗಳು ಒಂದನ್ನು ಗಮನಿಸಬೇಕು. ಅಲ್ಲಿಂದ ಜನರು ಭಯಭೀತರಾಗಿ ಬರುತ್ತಿದ್ದಾರೆ. ಆ ರೀತಿ ಬರುವವರಿಗೆ ತಾವು ವ್ಯವಸ್ಥೆ ಮಾಡಬೇಕು.

ಅಧ್ಯಕ್ಷರು : ಯಾರೂ ಬಂದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನೀವು ಯಾರು ಬಂದಿಲ್ಲವೆಂದರೆ ಹೇಗೆ? ನಾವು ಬಂದಿರುವುದನ್ನು ಇಲ್ಲಿ ಕರೆದುಕೊಂಡು ಬರಬೇಕಾಗುತ್ತದೆ ಅಷ್ಟೆ. ಅದರ ಬಗ್ಗೆ ಸರ್ಕಾರ ದಯವಿಟ್ಟು ಗಮನಹರಿಸಬೇಕು.

ಶ್ರೀ ಹೆಚ್.ಡಿ. ದೇವೇಗೌಡ : ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ಹೇಳಿದ್ದೇನೆ. ಮಹಾರಾಷ್ಟ್ರದ ಮುಖ್ಯಮಂತ್ರಿಗಳಿಗೆ ಪತ್ರ ಬರೆದಿರುವುದು ಅಷ್ಟೇ ಅಲ್ಲ, ಕೇಂದ್ರದ ಗೃಹಮಂತ್ರಿಗಳಿಗೂ ಪತ್ರ ಬರೆದಿದ್ದೇನೆ. ನಮ್ಮ ಸರ್ಕಾರದ ನಿಲುವನ್ನು ನಾನು ಇವತ್ತು ಆ ಪತ್ರದಲ್ಲಿ ವ್ಯಕ್ತಪಡಿಸಿರುವುದು? ಅಷ್ಟೇ ಅಲ್ಲ, ಇವತ್ತು ಯಾರು ಕನ್ನಡಿಗರು ಅಲ್ಲಿದ್ದಾರೋ ಅವರಿಗೆ ಯಾವುದೇ ರೀತಿ ಅಪಾಯವಾಗುವುದಕ್ಕೆ ಅವಕಾಶ ಕೊಡಬಾರದು. ಎನ್ನತಕ್ಕ ನಮ್ಮ ನಿಲುವನ್ನು ಹೇಳಿದ್ದೇವೆ. ಆದರೆ, ಇದರಲ್ಲಿ ಏನೋ ಆಗಿದೆ ಎಂದು ಭಾವಿಸಬೇಕಾಗಿಲ್ಲ. ಈಗಾಗಲೇ ಈ ಒಂದು ಹೇಳಿಕೆಯಿಂದ ಗಂಭೀರವಾದ ವಾತಾವರಣ ನಿರ್ಮಾಣವಾಗಿದೆ. ಅದಕ್ಕೆ ಯಾರು ಕಾರಣ ಎಂದು ಚರ್ಚೆ ಮಾಡುವುದಕ್ಕೆ ಬದಲಾಗಿ ನಾನು ಒಂದೇ ಒಂದು ವಿನಂತಿ ಮಾಡುತ್ತೇನೆ. ಇದು ಸೂಕ್ಷ್ಮವಾದ ವಿಷಯ. ಮಾನ್ಯ ಶ್ರೀ ಮೊಯ್ಲಿಯವರು ಹೇಳಿದ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ಇದನ್ನು ಮತ್ತೆ ಪ್ರವೋಕೇಷನ್ ಮಾಡುವುದರಲ್ಲಿ ಅರ್ಥವಿಲ್ಲ. ಈ ಸಮಸ್ಯೆಗೆ ನಾವು ಸೌಮ್ಯವಾದಂತಹ ವಾತಾವರಣದಲ್ಲಿ ಪರಿಹಾರವನ್ನು ಕಂಡುಕೊಳ್ಳಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಅವರು ಮಾತನಾಡುವಾಗ ಕೇಂದ್ರದ ಗೃಹಮಂತ್ರಿಗಳಿಗೆ ಪತ್ರ ಬರೆದಿದ್ದೇನೆಂದು ಹೇಳಿದರು. ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಮಾಡಿಕೊಳ್ಳತಕ್ಕಂಥದ್ದು ಪ್ರಧಾನಮಂತ್ರಿಗಳಿಗೂ ಒತ್ತಾಯ ಮಾಡಬೇಕು. ಜೊತೆಗೆ ಮಹಾಜನ್ ವರದಿ ಎಂದು ಕೈಕಟ್ಟಿಕೊಂಡು ಕುಳಿತುಕೊಳ್ಳುವ ಬದಲು ಮಹಾಜನ್ ವರದಿಯನ್ನು ತ್ವರಿತವಾಗಿ ಕಾರ್ಯಗತ ಮಾಡಿ

ಎಂದು ಹೇಳುವುದಕ್ಕೆ ಸರ್ವ ಪಕ್ಷಗಳ ನಿಯೋಗವನ್ನು ಕರೆದುಕೊಂಡು ಹೋಗಿ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡತಕ್ಕಂಥ ವ್ಯವಸ್ಥೆಯಾಗಬೇಕು. ತಾವು ಮಹಾಜನ್ ವರದಿ ಅಂತಿಮ ಎಂದು ಹೇಳಿದಿರಿ. ಅದರಲ್ಲಿ ಯಾವುದೇ ಹಿಂದುಮುಂದು ಇಲ್ಲ. ಅಂತಿಮ ಎಂದು ತಳ್ಳಿಕೊಂಡು ಹೋಗುವ ಬದಲು ಇದನ್ನು ಕಾರ್ಯಗತ ಮಾಡಿ ಎಂದು ಪ್ರಧಾನಮಂತ್ರಿಗಳಿಗೆ ಹೇಳುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಸರ್ವಪಕ್ಷಗಳ ನಿಯೋಗ ಕರೆದುಕೊಂಡು ಹೋಗಬೇಕೆಂದು ಮಾನ್ಯ ಮುಖ್ಯಮಂತ್ರಿಗಳನ್ನು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ : ನಾನು ಮತ್ತೊಮ್ಮೆ ಒಂದು ವಿಷಯವನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಈ ಸದನದ ಸಾರ್ವಭೌಮ. ಈ ಸದನ ಏನೇ ನಿರ್ಣಯ ತೆಗೆದುಕೊಂಡರು ನಾವು ಅದಕ್ಕೆ ತಲೆಬಾಗಬೇಕಾಗುತ್ತದೆ. ಇದು ನನ್ನ ವೈಯಕ್ತಿಕ ಪ್ರಶ್ನೆಯಲ್ಲ. ಇಂತಹ ವಿಷಯದಲ್ಲಿ ಪಕ್ಷದ ರಾಜಕಾರಣವನ್ನು ಬಿಟ್ಟು ಬಹಳ ಎತ್ತರದಲ್ಲಿ ಕೆಲಸ ಮಾಡಿಕೊಂಡು ಬಂದಿದ್ದೇನೆ. ಹಾಗೂ ಸರ್ವಸಮ್ಮತವಾದ ನಿಲುವನ್ನು ಅನುಸರಿಸಿಕೊಂಡು ಬಂದಿದ್ದೇನೆ ಅದರಲ್ಲಿ ವ್ಯತ್ಯಾಸವಿಲ್ಲ. ಶ್ರೀಮಾನ್ ವೀಶಪ್ಪ ಮೊಯ್ಲಿಯವರು ಹೇಳಿದಂಥ ಒಂದು ಮಾತನ್ನು ನಾನು ನಿರಾಕರಣೆ ಮಾಡುವುದಿಲ್ಲ. ನಾವೆಲ್ಲಾ ಮಾನ್ಯ ಅಧ್ಯಕ್ಷರ ಕೊಠಡಿಯಲ್ಲಿ ಕುಳಿತು ಯಾವ ರೀತಿಯಲ್ಲಿ ನಮ್ಮ ಅಭಿಪ್ರಾಯವನ್ನು ಈ ಸದನದ ಮುಖೇನ ವ್ಯಕ್ತಪಡಿಸಬೇಕು ಎನ್ನುವುದರ ಬಗ್ಗೆ ಒಂದು ಸರ್ವಸಮ್ಮತವಾದ ನಿರ್ಣಯವನ್ನು ಕೂಡ ಮಾಡಲಿಕ್ಕೆ ನಾನು ಸಿದ್ಧನಿದ್ದೇನೆ. ಈ ಸದನ ಅಪೇಕ್ಷಿಪಟ್ಟು, ಹೋಗಬೇಕು ಎನ್ನುವ ಸನ್ನಿವೇಶ ಉಂಟಾದಾಗ ಹೋಗೋಣ. ಈಗ ಅಲ್ಲ ಮೊದಲನೆ ಹಂತದಲ್ಲಲ್ಲ. ಶ್ರೀಮಾನ್ ನಂಜೇಗೌಡರು ಇದು ಮುಗಿದು ಹೋದ ಅಧ್ಯಾಯ ಎಂದು ಹೇಳಿದರು. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ.

ಏಕೆಂದರೆ, ಒಂದು ಹಂತದಲ್ಲಿ ಕೇಂದ್ರದ ಮುಖಂಡರುಗಳೇ ಈ ಮಾತನ್ನು ಹೇಳಿದರು. ಅದನ್ನು ರಾಜಕೀಯವಾಗಿ ಬಳಸಿಕೊಂಡು ಬರುತ್ತಿದ್ದಾರೆ. ಅದರ ಬಗ್ಗೆ ಚರ್ಚೆ ಮಾಡುವುದು ಈಗ ಬೇಡ. ಈ ಸನ್ನಿವೇಶ ಉಂಟಾದಾಗ ಈ ಸದನದಿಂದ ನಿಯೋಗ ಕಳಿಸಲಿಕ್ಕೆ ಹಿಂದುಮುಂದು ನೋಡುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಪ್ರಧಾನಮಂತ್ರಿಗಳಿಗೆ ಪತ್ರ ಬರೆಯುವುದು.

ಶ್ರೀ ಹೆಚ್.ಡಿ. ದೇವೇಗೌಡ : ಅದು ಆಗಬಹುದು.

SRI. B.I. PATIL : Sir, The law Minister told that he would disqualify us from the membership. It has gone on record. Why you want Kasargod? You must expunge those remarks of Law Minister.

MR. SPEAKER : I will get the records and examine. The discussion is closed.

6. ಚುನಾವಣಾ ಪ್ರಸ್ತಾವಗಳು

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೆ, ತಮ್ಮ ಅನುಮತಿಯಿಂದ ಚುನಾವಣಾ ಪ್ರಸ್ತಾವಗಳನ್ನು ಸಭೆಯ ಮುಂದೆ ಮಂಡಿಸಲಿಕ್ಕೆ ಇಚ್ಛಿಪಡುತ್ತೇನೆ.

ಅ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ 265(1)ನೇ ನಿಯಮದ ಅನುಸಾರವಾಗಿ ಈ ಸಭೆ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಗೆ ಹನ್ನೆರಡು ಜನ ಸದಸ್ಯರನ್ನು ಚುನಾಯಿಸಬೇಕು;